ಒಯ್ದ ಅದೇ ಬದುಕು ನನ್ನನ್ನು ನಿರ್ದಾಕ್ಷಿಣ್ಯವಾಗಿ ಕೆಳಗೆ ತಳ್ಳಿದ ಕಥೆ ಅವಳಿಗೆಲ್ಲಿ ಗೊತ್ತಿತ್ತು? ಅದನ್ನ ಕೇಳಿಸಿಕೊಳ್ಳದಷ್ಟು ಔದಾರ್ಯ ಅವಳಲ್ಲಿ ಇಲ್ಲವೆಂದಲ್ಲ. ಆದರೆ ಅದು ನನ್ನ ಅಹಂಕಾರಕ್ಕೆ ಬಿದ್ದ ಮೊದಲ ಪೆಟ್ಟು, ಕಳೆದು ಹೋದ ಕನಸು. ಅದನ್ನ ಹೇಳಿಕೊಳ್ಳುವ ಧೈರ್ಯ ನನ್ನಲ್ಲಿರಲಿಲ್ಲ. ಬಹಳಷ್ಟು ಸುತ್ತಿದ ಮೇಲೆ, ಓದಿದ ಮೇಲೆ, ಹೋರಾಡಿದ ಮೇಲೆ ನನಗೆ ಬದುಕು ಅಪೂರ್ಣವಾಗೇ ಉಳಿದಿದೆ ಅನಿಸಿದ್ದು ಸುಳ್ಳಲ್ಲ. ಇದ್ಯಾವುದೂ ಬೇಡವೆನಿಸಿ ಊರಿಗೆ ಮರಳಿದ್ದರೆ, ಅಮ್ಮ ಕಂಗಾಲಾಗಿ ನನ್ನನ್ನು ಕಾಡತೊಡಗಿದ್ದಳು. ಅಪ್ಪ ಯಥಾಪ್ರಕಾರ ಎಲ್ಲದಕ್ಕೂ ಗಂಭಿರ ಮೌನಿ. ಅದಕ್ಕೇ ಇರಬೇಕು ಅಮ್ಮನಿಂದ ಅರೆಕ್ಷಣವೂ ಸುಮ್ಮನಿರಲಾಗುತ್ತಿರಲಿಲ್ಲ. ಅಮ್ಮ ಏನಾದರೂ ಮಾತಾಡುತ್ತಲೇ ಇರುತ್ತಿದ್ದಳು. ಅವಳಿಗೆ ಒಬ್ಬಳೇ ಇರುವುದೆಂದರೆ ಆಗದು. ಅವಳು ಯಾವುದನ್ನೂ ಮುಚ್ಚಿಡಳು. ಎಲ್ಲವನ್ನೂ ಬಟಾಬಯಲು ಮಾಡುವ ಅಮ್ಮ, ಏನನ್ನೂ ತೋರಿಕೊಳ್ಳದ ಅಪ್ಪ... ಎರಡು ವೈರುಧ್ಯಗಳು. ಅವರಿಬ್ಬರೂ ತಮ್ಮದೇ ನೆಲೆಯಲ್ಲಿ ಹಗುರಾಗಲು ಯತ್ನಿಸುತ್ತ ಅಲ್ಲೇ ಖುಷಿ ಕಾಣುತ್ತಿದ್ದರು. ಅದೇ ನಾನು ಅತ್ತ ಮುಚ್ಚಿಡಲೂ ಆಗದೆ, ತೆರೆದಿಡಲೂ ತಿಳಿಯದೆ ಇಬ್ಬಂದಿತನದಲ್ಲಿ ನರಳುತ್ತಿದ್ದೆ. ನನ್ನ ಪ್ರತೀ ನಿರ್ಧಾರವೂ ದ್ವಂದ್ವದಲ್ಲಿ ಮುಗಿದು, ಒಂದು ಸಾಂತ್ವನಕ್ಕಾಗಿ ಹಪಹಪಿಸುತ್ತ ನಾನು ವಾರಿಜಳತ್ತ ಕೈ ಚಾಚುತ್ತಿದ್ದೆ. ಅವಳಾದರೂ ಅಷ್ಟೇ... ಅವಳು ತನ್ನ ಅಭಿಪ್ರಾಯ ಹೇಳುತ್ತಿದ್ದಳೇ ವಿನಾ ಯಾವುದನ್ನೂ ನನ್ನ ಮೇಲೆ ಹೇರದೆ ಮುಕ್ತವಾಗೇ ಬಿಟ್ಟುಬಿಡುತ್ತಿದ್ದಳು. ಎದುರಿನವರ ನ್ಯಾಯವನ್ನ ವಿವರಿಸುತ್ತಿದ್ದಳು. ಅವರ ಸ್ಥಾನದಲ್ಲೊಮ್ಮೆ ನಿಂತು ಯೋಚಿಸಿ ಆಮೇಲೆ ನಿರ್ಧರಿಸು ಅನ್ನುತ್ತಿದ್ದಳು. ನಾನು ಒಮ್ಮೊಮ್ಮೆ ನಾನು ಬೇಕೆಂದೇ ಬಿಟ್ಟ ಯೋಚನೆಯ ಎಳೆಯನ್ನು ಕೈಗೆತ್ತಿಕೊಟ್ಟು ಹೀಗೂ ಯೋಚಿಸು ಅಂದು ಸತಾಯಿಸುತ್ತಿದ್ದಳು. 'ವಾರೀ, ನನಗಾಗಿ ನೀನೊಮ್ಮೆ ನಿರ್ಧರಿಸು. ನಾನು ಏನನ್ನೂ ಮಾಡಲಾರೆ. ಈ ಬದುಕನ್ನು ಯಾರದಾದರೂ ಕೈಯಲ್ಲಿ ಕೊಟ್ಟು ನೆಮ್ಮದಿಯಾಗಿ ಬಿಡಬೇಕು ಅನಿಸಿದೆ, ಮೊಟ್ಟಮೊದಲ ಬಾರಿಗೆ ನಾನು ಮೋಸ ಹೋಗಿದ್ದೇನೆ. ನನಗೆ ಯಾರನ್ನು ನಂಬಲೂ ಭಯವಾಗಿದೆ. ನನ್ನ ನಂಬಿಕೆ ಮತ್ತೆ ಚಿಗುರುತ್ತಾ ಗೊತ್ತಿಲ್ಲ ವಾರೀ... ಹಾಗೆ ಯಾರಾದರೂ ಸಿಕ್ತಾರಾ ವಾರೀ...' ಎಂದು ಚೀರಬೇಕೆನಿಸುತ್ತಿತ್ತು.

*****

'ಏನು ರವೀ, ಬೆಳಗ್ಗೆದ್ದಾಗ್ಲಿಂದ ರೂಮ್ ಬಿಟ್ಟು ಆಚೆ ಬಂದೇ ಇಲ್ಲಾಂತ ಕಾಣುತ್ತೆ' ವಾರಿಜ ನಸು ನಗುತ್ತ ಕೋಣೆಯೊಳಗೆ ಬಂದಾಗ ಗಂಟೆ ಹನ್ನೆರಡು. ಚಂದ್ರಾ ಕೆಲಸ ಮುಗಿಸಿ ಹೋಗಿದ್ದಿರಲೂ ಸಾಕು.

'ಇವತ್ತು ನಿನಗೆ ಕೆಲಸ ಇಲ್ಲವಾ ವಾರೀ.'

'ಇಲ್ಲ ರವೀ, ಯಾಕೋ ಬೆಳಗ್ಗಿಂದ ಮೈ ಹುಷಾರಿಲ್ಲ, ಅದಕ್ಕೇ ರಜೆ ಮಾಡಿದೆ.'

'ಚಂದ್ರಾ ಹೋದಳಾ? ಬೆಳಗ್ಗಿಂದ ಅಮ್ಮ ಅವಳಿಗೆ ಬೋಧನೆ ಮಾಡಿದ್ದೇ ಮಾಡಿದ್ದು. ಆದ್ರೂ ಅವ್ಳು ಪಟ್ಟು ಬಿಡ್ತಾ ಇಲ್ಲ.'

'ನಾನೂ ಕೇಳಿಸ್ಕೊಂಡೆ ರವೀ. ಏನೇ ಅನ್ನು, ಅವಳ ಧೈರ್ಯ ಎಲ್ಲರಿಗೂ ಬರಲ್ಲ.'

'...'

'ಸರಿ, ನೀ ಎದ್ದು ಹೊಲದ ಕಡೆಗಾದ್ರೂ ಹೋಗಿ ಬಾ ರವೀ. ಇವೊತ್ತು ಒಳ್ಳೆ ಮೋಡ ತುಂಬ್ಕೊಂಡಿದೆ, ಸಂಜೆ ಮಳೆ ಬರಬಹುದು.'

'ನೀನೂ ಬಾ ವಾರೀ' ನಾನು ಎದ್ದೆ .